

ತಯಾರಿ... ಅಯ್ಯಯ್ಯಯ್ಯೋ, ಈ ಮನ್ಶ್ಯ ಏನ್ ಉಂಬ್ ತಿಂಬ್ಲೆ ಹುಟ್ಟಿಕ್ಕಿದ್ನೋ ಏನೋ? ಇಷ್ಟಾದ್ರಾತಾ? ಗುಡ್ಸು, ವರ್ಸು, ತೊಳೆ, ಬಳಿ ಅಂದ್ಕ್ಯಂತ ಒಂದ್ಬೆಳಗೂ ಜಾಮ್ದಲೆದ್ರೆ ಮದ್ರಾತ್ರಿವರೆಗೂ ಕುಂಡೆ ಊರಲೂ ಪರ್ಸೊತ್ತಿರ್ತಿಲ್ಲೆ. ಆದ್ರೂ 'ಎಂತಾ ಪಡಹೊಡೆತ್ರೆ ಮನೆವಳಂಗೆ? ಒಂದ್ ಊಟತಿಂಡಿ ಹೊತ್ತೊತ್ತಿಗೆ ಮಾಡಾಕಲೂ ಆಗ್ತಿಲ್ಯ? ಇನ್ನು ಅದನ್ನೂ ಯಂಗಾನೇ ಮಾಡ್ತ್ಯ' ಎನ್ನುವ ಗಂಡಸ್ರ ವಗ್ಗರಣೆಗೇನೂ ಕಡ್ಮೆ ಇರ್ತಿಲ್ಲೆ. ಹೆಣ್ಮಕ್ಳ ಬದ್ಕುಷ್ಟುವ ಇದರಲ್ಲೇ ಕಳೆದು ಹೋಪದೇಯ. ಯಂತಕರು ಮದ್ವೆ ಮಾಡ್ತ್ವ ಏನ ಯಂಗಕ್ಕೆ. ಅದೂ ಅಲ್ದೆಯೇ ಸರೀ ವಯಸ್ಸಿಗೆ ಕನ್ಯಾದಾನ ಮಾಡಿ ಪುಣ್ಯ ಕಟ್ಕ್ಯಂಡಿ ಹೇಳಿ ಪೊಕ್ಕೆ ಕೊಚ್ಚಲೇನೂ ಕಮ್ಮಿ ಇಲ್ಲೆ.' ಎನ್ನುತ್ತ ಮನಸ್ಸಿನಲ್ಲಿಯೇ ಮಂಡಿಗೆ ತಿಂದೆನೆಂದುಕೊಂಡರೂ 'ಎಂತಾ ಹೊಸ ರೋಗ ಶುರುವಾತನೆ ಈವತ್ತು?' ಎಂದು ಅತ್ತೇರು ಕೇಳಿದಾಗ 'ಅಹ್ಣ, ಎಂತ ಇಲ್ಲೆ ಈ ಸಲ ತಂದ ದೋಸೆ ಅಕ್ಕೀಲಿ ಕಲ್ಲು ಭತ್ತ ಎಲ್ಲಾ ಇದ್ದು, ಆರಿಸ್ತಾ ಇದ್ದಿ' ಎಂದು ಬೀಸುವ ದೊಣ್ಣೆ ತ್ವಪಿಸಿಕೊಂಡರೂ ತಾನು ಸ್ವಲ್ಪ ಜೋರಾಗೇ ಗೊಣಗಿಕೊಂಡದ್ದರ ನೆನಪಾಗಿ ತನ್ನ ತಲೆಗೆ ತಾನೇ ಒಂದು ಪೆಟ್ಟು ಹೊಡೆದುಕೊಂಡಳು.

ಆಗಲೇ ನೆನೆಸಿಟ್ಟು ಮೆದುಗೊಂಡ ಅಕ್ಕಿ ಹಾಗೂ ಸೋಸಿದ ಕಬ್ಬಿನ ಹಾಲು ತೆಗೆದುಕೊಂಡು ಕಡೆಯಲು ಹೋಗಿ ಕುಳಿತಳು. ಮಣಭಾರದ ಒಳಕಲ್ಲನ್ನು ಕಂಡು ಜೀವ ಬಾಯಿಗೆ ಬಂದಂತಾಯಿತು. 'ಜಲ ಜಲನೇ ಉದುರವ್ವ...' ಎಂದು ಹಿರೀಕರು ಬೀಸುವ ಕಲ್ಲಿಗೆ ಕೈ ಮುಗಿದದ್ದು ಸುಮ್ನೇನಾ ಮತ್ತೆ ಎಂದುಕೊಳ್ಳುತ್ತಾ ಒಳಕಲ್ಲನ್ನು ಚೊಕ್ಕವಾಗಿ ತೊಳೆದಳು.

'ಈ ಊರ್ಗೊಂದು ಕಬ್ಬಿನ್ಗಾಣ ಬಂತು ಅಂದ್ರೆ ಅದು ಕಿತ್ತೆದ್ದು ಹೋಪತಂಕಾನೂ ನಮ್ಮನೇಲಿ ತೊಡೆದೇವ್ಗೆ ತುಂಡಿಲ್ಲೆ. ಅದು ಮಾಡಾದೇನು ಸಸಾರನಾ? ಸಾಮಾನ್ಯ ಸೌರ್ಸವಾ? ರಟ್ಟೆ ಸೊಂಟ ಎಲ್ಲ ಬಿದ್ದೋಗ್ತು. ಆದ್ರೆ ಬಿಸೀ ತುಪ್ಪ ಹಾಕ್ಯಂಡು ತಿನ್ನೂಲ್ ಮಾತ್ರ ಏವನ್ ಆಗ್ತು. ಒಂದೊಂದ್ಸಾರಿ ಸಾಯ್ಲಿ ಅನ್ಸಿದ್ರೂವ ಖುಶೀಲಿ ತಿಂತ್ವಲಿ ಪಾಪ, ನಾ ಮಾಡಾದೆಚ್ಚಾ ಅವು ತಿಂಬದೆಚ್ಚಾ?' ಎಂದುಕೊಳ್ಳುತ್ತಾ ಕಬ್ಬಿನ ಹಾಲಿನಲ್ಲೇ ಅಕ್ಕಿ ಕಡೆದು